


# ಮರದ ಮೇಲೊಂದು ಹೋಟೆಲ್ ಮಾಡಿ..!

'ಅಲ್ಲೊಂದು ಕಟ್ಟಡ ಇತ್ತು, ಆನಂತರ ಮರವೊಂದು ಹುಟ್ಟಿ ಕಟ್ಟಡವನ್ನೇ ಮೇಲೆತ್ತಿಕೊಂಡು ಹೋಗಿದೆಯೇನೋ' ಎಂಬಂತಿರುವ ಹೋಟೆಲ್ ಇದು. ಇದರ ಹೆಸರು ಒಕಿನಾವ ಟ್ರೀ ರೆಸ್ಟೋರೆಂಟ್. ಇಲ್ಲಿ ತಿಂಡಿ ತಿಂದು ಟೀ ಕುಡಿಯಬೇಕು ಎಂದೆನಿಸಿದರೆ ನೀವು ಜಪಾನ್‌ಗೆ ಹೋಗಬೇಕು. ದಕ್ಷಿಣ ಜಪಾನ್‌ನ ಹೈವೇ ನಂ. 58ರ ಪಕ್ಕದಲ್ಲಿ ಒನೊಯಾಮಾ ಪಾರ್ಕ್‌ನ ಪ್ರವೇಶದ ಬಳಿ ಈ ಮರದ ಮೇಲಿನ ಹೋಟೆಲ್ಲನ್ನು ನೀವು ಕಾಣಬಹುದು. ಮರದ ಬುಡದ ಬಾಗಿಲ ಬಳಿ ಹೋಗಿ ಅಲ್ಲಿಂದ ಲಿಫ್ಟ್ ಮುಖಾಂತರ ಮೇಲೇರಿದರೆ ಊಟ, ತಿಂಡಿಯ ಘಮ ಘಮ.

ಈ ಚಿತ್ರದಲ್ಲಿನ ಕಟ್ಟಡ ನೋಡಿದ ನಿಮಗೆ ಅದು ಹೋಟೆಲ್ ಎಂದೇನೋ ತಿಳಿಯಿತು. ಆದರೆ ಕಟ್ಟಡವನ್ನು ಎತ್ತಿಕೊಂಡಿರುವ ಮರದ ಬಗ್ಗೆ ನೀವು ತಿಳಿಯಬೇಕಾದ್ದು ಬೇರೆಯೇ ಇದೆ. ಚಿತ್ರ ನೋಡಿದವರು ಒತ್ತಟ್ಟಿಗಿರಲಿ, ಈ ರೆಸ್ಟೋರೆಂಟಿನ ಮುಂದೆ ನಿಂತು ಅರೆಕ್ಷಣ ಬೆರಗಾಗಿ ನಂತರ ಒಳಗೆ ಹೋಗಿ ತಿಂಡಿ ತಿಂದು ವಾಪಸು ಬಂದವರೂ, ಮತ್ತೊಮ್ಮೆ ಮರವನ್ನು ನೋಡುವವರೆಗೂ ಇದು ಮರ ಅಲ್ಲ ಎಂದು ಗೊತ್ತಾಗುವುದೇಇಲ್ಲ! ನೈಜವಾಗಿರುವ ಒಣ ಮರ ಎಂಬಂತೆ ಕಾಣುವ ಇದನ್ನು, ತೀರಾ ಗಮನಿಸಿ ನೋಡಿದಾಗ ತಿಳಿಯುವ ಸತ್ಯ ಎಂದರೆ ಮರ ಕಾಂಕ್ರೀಟ್‌ನಿಂದ ಮಾಡಿದ್ದು! ಅಪರೂಪದ ಕೌಶಲ್ಯದಿಂದ ಕಾಂಕ್ರೀಟ್ ಬಳಸಿ ನಿರ್ಮಿಸಿರುವ ಈ 'ಮರದ ಮೇಲಿನ ಮೇಲಿನ' ಹೋಟೆಲ್ ನೋಡಲೆಂದೇ ನೂರಾರು ಜನರು ಬರುತ್ತಾರೆ.

'ಮರದ ಮೇಲೊಂದು ಹೋಟೆಲ್ ಮಾಡಿದಲ್ಲಿಗೆ ಹೋಗಿ ಬಿಲ್‌ಗೆ ಅಂಜಿದೊಡೆಂತಯ್ಯ..' ಎನ್ನುವ ಮಾತೂ ಇದೆ. ಏಕೆಂದರೆ ತಿಂಡಿ– ತೀರ್ಥಗಳ ಬೆಲೆ ಬಿಲ್ ಸಾಕಷ್ಟು ದುಬಾರಿಯೇ ಅಂತೆ.

■ **ಆರ್.ಶರ್ಮಾ ತಲವಾಟ**

(ಚಿತ್ರ ಕೃಪೆ: ಇಅಮೇಜಿಂಗ್)

# ಹೂ ದೇಹ!

**ತ**ನ್ನ ಕ್ರಿಯಾತ್ಮಕತೆಯನ್ನು ತೋರಿಸಲು ಮನುಷ್ಯನಿಗೆ ಹತ್ತು ಹಲವಾರು ಮಾರ್ಗ. ಅದರಲ್ಲಿ ಇದೋ ನೋಡಿ ತಮ್ಮ ದೇಹಸಿರಿಯನ್ನೇ ಅಲಂಕಾರಿಕ ಆಕಾರದಲ್ಲಿ ಬಳಸಿ ಆಕರ್ಷಕಗೊಳಿಸಿದ್ದಾರೆ. ವಿವಿಧ ಆಕಾರದ ಹೂಗಳ ರಚನೆ, ಮೊಗ್ಗಿನ ರಚನೆ, ಹಣ್ಣಿನ ರಚನೆಗೆ ತಮ್ಮ ನಗ್ನ ದೇಹವನ್ನೇ ವಿವಿಧ ಭಂಗಿಯಲ್ಲಿ ಬಳಸಿಕೊಂಡಿದ್ದಾರೆ. ಹೂಗಳಲ್ಲದೇ ನವಿಲಿನ ಆಕಾರದಂಥ ವಿವಿಧ ರಚನೆಯನ್ನೂ ಕಾಣಬಹುದು.

■ **ಸಿದ್ದಲಿಂಗಯ್ಯ ಕಣಕಾಲಮಠ**







